ಕೊಡಿಸುವಂತಹದ್ದನ್ನು ರೈತರನ್ನು ಮತ್ತು ಕಾರ್ಖಾನೆಯವರನ್ನು ಕರೆಸಿ ನಾನು ಮಾಡುತ್ತೇನೆ.

ಅಧ್ಯಕ್ಷರು: ಬಂಡೆಪ್ಪ ಕಾಶೆಂಪೂರ್‌ರವರ ಪರವಾಗಿ ನಾಡಗೌಡರು ಅವರು ಹೇಳಿದ್ದಾರೆ. ಅವರ ಹತ್ತಿರ ವೈಯಕ್ತಿಕವಾಗಿ ಮಾತನಾಡಿ.

ಶ್ರೀ ಸಿದ್ದು ಸವದಿ: ಅವರ ಹತ್ತಿರ recovery ಇದ್ದರೆ ಕೊಡಲಿ. ಅದರ ಬಗ್ಗೆ action ತೆಗೆದುಕೊಳ್ಳಲಿ ಎಂದು ಹೇಳುತ್ತೇನೆ.

ರೈತರ ಬಿತ್ತನೆ ಬೀಜ ಖರೀದಿಸುವುದು

13 (23) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರು ಬಿತ್ತನೆ ಬೀಜ ಖರೀದಿಸಲು ಸರ್ಕಾರ ಅನುಸರಿಸುವ ಮಾನದಂಡಗಳೇನು ;

ಆ) ರೈತರನ್ನು ಸಣ್ಣ ರೈತ ಮತ್ತು ಅತೀ ಸಣ್ಣ ರೈತರೆಂದು ವಿಭಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಈ ರೀತಿ ವಿಭಜಿಸಲು ಕಾರಣಗಳೇನು ;

ಈ) ಈ ರೀತಿ ವಿಭಜಿಸಿರುವುದರಿಂದ ಅತಿ ಸಣ್ಣ ರೈತರಿಗೆ ಅನ್ಯಾಯವಾಗುವುದಿಲ್ಲವೇ ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):

ಅ) ರೈತರು ಬಿತ್ತನೆ ಬಿಜವನ್ನು ರಿಯಾಯಿತಿ ದರದಲ್ಲಿ ಖರೀದಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಕೆಳಗಿನಂತಿವೆ:

1. ರಾಜ್ಯದ ಎಲ್ಲಾ ರೈತರಿಗೂ ಗರಿಷ್ಠ 2 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ ಇದರಲ್ಲಿ ಯಾವುದು ಕಡಿಮೆಯೋ ಆ

ವಿಸ್ತೀರ್ಣಕ್ಕೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ಸರಬರಾಜು ಮಾಡಲಾಗುವುದು.

2. ದೊಡ್ಡ ರೈತರಿಗೆ ಪ್ರಮಾಣಿತ ಬಿತ್ತನೆ ಬೀಜಗಳನ್ನು ಮಾತ್ರ ಮತ್ತು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರಮಾಣಿತ ಹಾಗೂ ಖಾಸಗಿ ಸಂಸ್ಥೆಗಳ ಸಂಕರ/ತಳಿಗಳ ಬಿತ್ತನೆ ಬೀಜಗಳು ಸೇರಿದಂತೆ ನಿಜ ಚೀಟಿ ಬಿತ್ತನೆ ಬೀಜಗಳನ್ನು ಸಹ ವಿತರಿಸಲಾಗುವುದು.

3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ಟೆಂಡರ್ ಕರೆದು, ಟೆಂಡರಿನಲ್ಲಿ ಅಂಗೀಕರಿಸಲಾಗಿರುವ ಸಂಸ್ಥೆಗಳು ಹಾಗೂ ತಳಿ/ಸಂಕರ ತಳಿಗಳ ಬಿತ್ತನೆ ಬೀಜಗಳನ್ನು ನಿಗದಿಪಡಿಸಿದ ಮಾರಾಟ ದರದಂತೆ ರಾಜ್ಯದ ರೈತ ಸಂಪರ್ಕ ಕೇಂದ್ರಗಳು ಮತ್ತು ಹೆಚ್ಚುವರಿಯಾಗಿ ಗುರುತಿಸಿದ ಮಾರಾಟ ಕೇಂದ್ರಗಳ ಮೂಲಕ ವಿತರಣೆ ಮಾಡಲಾಗುತ್ತಿದೆ.

4. ರಿಯಾಯಿತಿ ದರವು ವಿವಿಧ ಬೆಳೆಗಳ L1 ಮಾರಾಟ ದರದ ಶೇ. 50ರಂತೆ, ನೆಲಗಡಲೆ, ಸೋಯ ಅವರೆ ಮತ್ತು ಕಡಲೆ ಬಿತ್ತನೆ ಬೀಜಕ್ಕೆ ಪ್ರತಿ ಕೆ.ಜಿ.ಗೆ ರೂ. 12.00ರಂತೆ ರಿಯಾಯಿತಿ ದರವನ್ನು ನೀಡಲಾಗುವುದು.

5. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಂದಾಯ ಇಲಾಖೆಯಿಂದ ಪಡೆದುಕೊಂಡಿರುವ ಕಾಲೋಚಿತವಾದ ಪಟ್ಟಿಯಲ್ಲಿರುವ ಅಧಿಕೃತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜವನ್ನು ವಿತರಿಸಲಾಗುವುದು.

ಆ) ಇಲ್ಲ ಬಿತ್ತನೆ ಬೀಜ ವಿತರಿಸುವಾಗ ಸಣ್ಣ ಮತ್ತು ಅತಿ ಸಣ್ಣ ರೈತರೆಂದು ವಿಭಜಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ವೆಂಕಟರಾವ್ ನಾಡಗೌಡ (ಶ್ರೀ ಬಂಡೆಪ್ಪ ಕಾಶೆಂಪೂರ್‌ರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಏನು ನಿಯಮಗಳು ಎನ್ನುವುದರ ಬಗ್ಗೆ ಹೇಳಿದ್ದಾರೆ. ನಾನು ತಮ್ಮ ಮೂಲಕ ಕೃಷಿ ಸಚಿವರಿಗೆ ಒಂದು ವಿನಂತಿಯನ್ನು ಮಾಡುತ್ತೇನೆ ಹಾಗೂ ಸಲಹೆಯನ್ನು ಕೊಡುತ್ತೇನೆ. ಈ ಬೀಜೋತ್ಪಾದನೆಯನ್ನು ಮಾಡುವ private companyಗಳು ಮತ್ತು ಸಹಕಾರಿ ಸಂಘಗಳು ಯಾವುದೇ ನಮ್ಮ ಸಹಕಾರಿ ಸಂಸ್ಥೆಗಳು ಕೂಡ ರೈತರಿಗೆ ಬೀಜೋತ್ಪಾದನೆಯನ್ನು ಮಾಡುವುದಕ್ಕೆ ಕೊಡುತ್ತೇವೆ. ಅವರಿಂದ ನಾವು procure ಮಾಡಿ ಆ ಸೀಡ್‌ಗಳನ್ನು ಮತ್ತೆ ರೈತರಿಗೆ ಮಾರಾಟ ಮಾಡುವುದು ಇಲ್ಲಿ ನಡೆದಿರತಕ್ಕಂತಹ ವ್ಯವಸ್ಥೆಯಾಗಿದೆ. ಆದರೆ ಬೀಜೋತ್ಪಾದನೆಯಿಂದ ಖರೀದಿ ಮಾಡುವ ರೇಟ್ ಎಷ್ಟು ? ಮತ್ತು ಆ ರೈತರಿಗೆ ಮಾರಾಟ ಮಾಡುವಾಗ ಏನು ಬೆಲೆಗೆ ನೀವು ಮಾರಾಟವನ್ನು ಮಾಡುತ್ತೀರಿ, ಅದರ ಅಂತರ ಎಷ್ಟು ? ಈಗ Privateನವರು for example sunflower seeds ಅನ್ನು ತೆಗೆದುಕೊಂಡರೆ, ರೈತರಿಗೆ ಇವರು ಕೊಡುವುದು ಬಹಳ ಅಂದರೆ 7 ರಿಂದ 8 ಸಾವಿರ ರೂಪಾಯಿಗಳಿಗೆ ತೆಗೆದುಕೊಳ್ಳುತ್ತಾರೆ. ಇವರು ಮಾರಾಟ ಮಾಡುವಾಗ 300 ರಿಂದ 450 ರೂಪಾಯಿಗಳಿಗೆ ಕೆಜಿಗೆ ಮಾರಾಟ ಮಾಡುತ್ತಾರೆ. ಅದನ್ನು ಕೂಡ ತಾವು ನಿಯಂತ್ರಣದಲ್ಲಿಡಬೇಕಾಗುತ್ತದೆ. ರೈತರಿಗೆ ಖರೀದಿ ಮಾಡುವಾಗ ಕೊಡುವ ರೇಟ್ ಮತ್ತೆ ರೈತರಿಗೆ ಅದನ್ನು ಪ್ಯಾಕ್ ಮಾಡಿಕೊಡುವ ರೇಟ್‌ನಲ್ಲಿ ಎಷ್ಟು ವ್ಯತ್ಯಾಸವಿದೆ? ಅಷ್ಟು ವ್ಯತ್ಯಾಸವನ್ನು ನಾವೇಕೆ ಇಟ್ಟುಕೊಳ್ಳಬೇಕು ಎಂಬ ಬಗ್ಗೆ ಚರ್ಚೆ ಮಾಡಬೇಕು even ನಾವು ಕೂಡ, ಕೊಡುವಾಗ ನಾವು

ಕೊಡುವುದು 6 ರಿಂದ 7 ಸಾವಿರ ಅದನ್ನು ಮಾರುವಾಗ 150 ರಿಂದ 250 ರೂ.ಗಳಿಗೆ ಒಂದು ಕೆಜಿಗೆ ಮಾರಾಟ ಮಾಡುತ್ತಾರೆ. ನೀವು ಅದರ ಮೇಲೆ ಸ್ವಲ್ಪ ನಿಯಂತ್ರಣವನ್ನು ಇಟ್ಟರೆ ಇನ್ನು ಕೂಡ ಕಡಿಮೆ ದರದಲ್ಲಿ ರೈತರಿಗೆ ಈ ಬೀಜಗಳನ್ನು ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ತಾವು ಗಮನಹರಿಸಬೇಕೆಂದು ತಮ್ಮ ಮೂಲಕ ಕೃಷಿ ಸಚಿವರಿಗೆ ಮನವಿಯನ್ನು ಮಾಡುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್: ಸನ್ಮಾನ್ಯ ಅಧ್ಯಕ್ಷರೇ, ಈ ಬೀಜದ ಮೇಲೆ ನಿಗಾ ಇಡುವಂತಹದ್ದು, ನಿಯಂತ್ರಣವನ್ನು ಇಡುವಂತಹದ್ದು ಕೇಂದ್ರ ಸರ್ಕಾರ ಮಾನ್ಯ ಸದಸ್ಯರು ಸೂರ್ಯಕಾಂತಿ ಬೀಜದ ಬಗ್ಗೆ ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ರೈತರಿಂದ 150 ರೂ.ಗಳಿಗೆ ಕೆ.ಜಿ. ತೆಗೆದುಕೊಂಡರೆ ಅವರು 900 ರಿಂದ 1000 ರೂ.ಗಳಿಗೆ ಕೆ.ಜಿ.ಯನ್ನು ಮಾರುತ್ತಾರೆ. ಅದು ಬಂಗಾರಕ್ಕಿಂತಲೂ ರೇಟ್ ಜಾಸ್ತಿಯಾಗುತ್ತಿರುವಂತಹ ಇವತ್ತು ವ್ಯಾಪಾರ ನಡೆಯುತ್ತಿದೆ. ಅದರ ಮೇಲೆ ನಾವು ಯಾವುದೇ ರೀತಿಯಿಂದಲೂ ಹದ್ದುಬಸ್ತಿನಲ್ಲಿಡುವಂತಹ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಹಾಗಾಗಿ ಆ ಅಧಿಕಾರವನ್ನು ಕೇಂದ್ರದವರು ರಾಜ್ಯ ಸರ್ಕಾರಕ್ಕೆ ಕೊಟ್ಟರೆ ನೀವು ಏನು ಹೇಳುತ್ತಿದ್ದೀರಿ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವೆಂಕಟರಾವ್ ನಾಡಗೌಡ: ಈ ರೀತಿ ಹೇಳಿದರೆ ಹೇಗೆ? ಸರ್ಕಾರ ಅಂದರೆ ಕೇಂದ್ರ ಸರ್ಕಾರವಾದರೂ ಅದು ಕೂಡ ಸರ್ಕಾರವೇ? ತಾವು ಕೇಂದ್ರ ಸರ್ಕಾರದವರ ಜೊತೆಯಲ್ಲಿ ಸಂಪರ್ಕವನ್ನು ಮಾಡಿ ನಿಮಗೆ ಲೂಟಿ ನಡೆಯುತ್ತಿರುವುದು ಕಣ್ಮುಂದೆ ನಡೆಯುತ್ತಿದೆ ಅದು ಬರುವುದಿಲ್ಲವೆಂದು ಹಾರಿಕೆಯ ಉತ್ತರವನ್ನು ಕೊಟ್ಟರೆ ಸರಿಯಲ್ಲ. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಯವರು ಇದ್ದಾರೆ. ಇದನ್ನು ತಾವು ಕೇಂದ್ರ ಸರ್ಕಾರದ ಗಮನಕ್ಕಾದರೂ ತರಬೇಕಲ್ಲವೇ? ನಿಮಗೆ ಅಧಿಕಾರ ಇದೆ. ಇಲ್ಲಿ ಹೀಗೆ ಲೂಟಿ ಆಗುತ್ತಿದೆ ಅದನ್ನು ಕಡಿಮೆ ಮಾಡಿ ಎಂದು ಏನಾದರೂ ನೀವು

ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೀರಾ? ಅವರನ್ನು ನೀವು ಕೇಳಿದ್ದೀರಾ? ಈ ಬಗ್ಗೆ ತಾವು ಉತ್ತರವನ್ನು ಕೊಡಿ. ನೀವು ಅದನ್ನು ಮಾಡಲಾರದೆ ಆಗಿದೆ, ಗೊತ್ತಿದೆ ನಮಗೆ ಸಂಬಂಧವಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ಬೊಟ್ಟು ಮಾಡಿದರೆ ಇದರಿಂದ ರೈತರಿಗೆ ಎಷ್ಟು ವಂಚನೆಯಾಗುತ್ತದೆಂಬುದನ್ನು ಯೋಚನೆ ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ರಾಣೆ ಬೆನ್ನೂರಿನಲ್ಲಿ sunflower ಅನ್ನು ಬೆಳೆಯುತ್ತಾರೆ. ನಾನು ರೈತರ ಪರವಾಗಿ ಮಾತನಾಡುತ್ತಿದ್ದೇನೆ. ನಾನು ಅಲ್ಲಿಯ stopಗೆ ಹೋಗಿದ್ದೇನೆ. ಅಲ್ಲಿ ರೈತರಿಗೆ 1 ಕೆಜಿಗೆ 100 ರೂಪಾಯಿ ಕೊಡುತ್ತಾರೆ. ಅವರು ಅದನ್ನು ತಂದು ಇಲ್ಲಿ ಮಾರಾಟ ಮಾಡತಕ್ಕಂಹದ್ದು 500 ರಿಂದ 700 ರೂಪಾಯಿಗಳು. ಎಷ್ಟು ಬರುತ್ತದೆಯೋ ಅಷ್ಟಕ್ಕೆ ಮಾರಾಟ ಮಾಡುತ್ತಾರೆ. ಸರ್ಕಾರದಿಂದ ಸಬ್ಸಿಡಿಯನ್ನು ಏನು ಫಿಕ್ಸ್ ಮಾಡುತ್ತಾರೆಂದರೆ, ಈ ದೇಶದಲ್ಲಿ ಮಹಾನ್ ವಿಜ್ಞಾನಿಗಳು ಕೃಷಿ ಸಂಶೋಧಕರು ನಾವು ಬಹಳ ಓದಿದ್ದೇವೆ. ಅವರನ್ನೆಲ್ಲಾ ಹೊಂದಿದ್ದೇವೆ. ಅವರನ್ನೆಲ್ಲಾ ಸೇರಿ ಎಲ್–1 ಎಂದು ಹೇಳಿ, ರೈತರ ಪರವಾಗಿ ಒಂದೆರಡು ನಿಮಿಷ ಇರುವ ನಿಜಾಂಶವನ್ನು ಹೇಳುತ್ತೇನೆ ತಾವು ಕೇಳಿ.

ಅಧ್ಯಕ್ಷರು: ರೈತರ ಪರ ವಿರೋಧ ಅಂತ ಅಲ್ಲ. ನೀವು ಏನಾದರೂ clarification ಇದ್ದರೆ ಕೇಳಿ. ಎಲ್ಲರೂ ರೈತರ ಪರವಾಗಿದ್ದಾರೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಎಲ್–1 ಎಂದು ಫಿಕ್ಸ್ ಮಾಡಿ 180 ರೂಪಾಯಿ ಕೃಷಿ .....

ಅಧ್ಯಕ್ಷರು: ನೀವು clarification ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾತನಾಡಿದರೆ ಸಾಕು ನಾವು ರೈತರ ಪರವಾಗಿದ್ದೇವೆಂದು ಹೇಳುತ್ತಾರೆ. ಸಬ್ಸಿಡಿಗೆ ಎಲ್–1 ಎಂದು ಫಿಕ್ಸ್

ಮಾಡುತ್ತಾರೆ. ಅದು ಕೇಂದ್ರವಲ್ಲ ಸ್ವಾಮಿ. ಸಬ್ಸಿಡಿಯನ್ನು ಯಾರು ಫಿಕ್ಸ್ ಮಾಡುವುದು?

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ.

ಶ್ರೀ ಎಸ್.ಎ. ರವೀಂದ್ರನಾಥ್: ಪರಿಶೀಲನೆ ಮಾಡಿ ಅದನ್ನು ಸರಿ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

ಅಧ್ಯಕ್ಷರು: ಆಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

2 (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 4.3.2011ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 63 ಪ್ರಶ್ನೆಗಳ ಪೈಕಿ 58 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ: 25.2.2011ರ 1ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 31 ಪ್ರಶ್ನೆಗಳ ಪೈಕಿ 28 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ಶೂನ್ಯವೇಳೆ ಶ್ರೀಮತಿ ಮಲ್ಲಿಕಾ ಪ್ರಸಾದ್‌ರವರೆ, ತಾವು ಮಾತನಾಡಿ.

(ಅನುಬಂಧ – 1 ಹಾಗೂ ಅನುಬಂಧ – 2)

3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು:

(ಅ) ವಿಷಯ: ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ವೈದ್ಯರುಗಳಿಗೆ ಆಗಿರುವ ತೊಂದರೆಯ ಬಗ್ಗೆ.

ಶ್ರೀಮತಿ ಮಲ್ಲಿಕಾ ಪ್ರಸಾದ್ (ಪುತ್ತೂರು): ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ವೈದ್ಯರುಗಳಿಗೆ ಈಗಿನ ದಿನದಲ್ಲಿ ಆಗಿರುವಂತಹ ತೊಂದರೆಗಳನ್ನು ನಾನು ತಮ್ಮ ಮುಂದೆ ಹೇಳಲು ಬಯಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಕ್ಲಿನಿಕ್‌ಗಳಲ್ಲಿ ಪುರುಷ ಹಾಗೂ ಮಹಿಳೆಯರಿಗೆ